**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 729/2024** **ಫ್ರಾ.ಸಾ –11**

**ಚಾ.ಸಾ – 19**

**ದಿನಾಂಕಃ 26.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಮೀಳಾ ವಿ ಆರ್ |
| ಗಂಡನ ಹೆಸರು | : | ಮಹೇಶ್ |
| ವಯಸ್ಸು | : | 43ವರ್ಷ |
| ಉದ್ಯೋಗ | : | ಮಹಿಳಾ ಮುಖ್ಯ ಪೇದೆ |
| ವಾಸ ಸ್ಥಳ | : | ಹಾತೂರು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 2019 ರಿಂದ ಜೂನ್ 2025 ರ ತನಕ ಪೊನ್ನಂಪೇಟೆ ಪೊ.ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 21.06.2023ರಂದು ನಾನು ಠಾಣಾ SHO ಕರ್ತವ್ಯದಲ್ಲಿದ್ದಾಗ ಸಮಯ 19.30 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ನಾನು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿದ್ದು ಈಗ ತಂದೆಯ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದು ಆರೋಪಿ ದಿ. 07.05.2023ರಂದು ಬೆ. 09.00 ಗಂಟೆಯಿದ ದಿ. 21.06.2023 ರ 13.18 ಗಂಟೆ ವರೆಗೆ ಆರೋಪಿ ಮೊಬೈಲ್ ನಿಂದ ನನ್ನ ನಂಬರ್ ಗೆ whasapp and facebook ಮುಖಾಂತರ message ಮಾಡಿ ಹಣ ಕೊಡುವಂತೆ ಹಾಗೂ ತನ್ನ ಕುಟುಂಬದವರಿಗೆ ಬೆದರಿಕೆ ಹಾಕಿ ಮಾನಹಾನಿ ಮತ್ತು ಪ್ರಾಣಹಾನಿ ಮಾಡುತ್ತಿರುವುದಾಗಿ ಆರೋಪಿ ಮೇಲೆ ಕಾನೂನು ರೀತಿ ಕ್ರಮ ಕೈ ಗೊಳ್ಳಬೇಕಾಗಿ ಕೋರಿದ ಮೇರೆಗೆ FIR ದಾಖಲಿಸಿರುತ್ತೇನೆ ಮತ್ತು ಮೇಲಾದಿಕಾರಿಗಳಿಗೆ

ನೀಡಿರುತ್ತೇನೆ.

ದಿ. 22.06.2023 ರಂದು ಚಾಸಾ 1 ರವರು 164 statement ನೀಡಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ಆರೋಪಿಯವರ ತಂದೆಗೆ ವಿಚಾರಣೆ ಮಾಡಲು ನೋಟೀಸ್ ನೀಡಿರುತ್ತೇನೆ. ದಿ. 23.06.2023 ರಂದು ಆರೋಪಿಯ ತಂದೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿರುತ್ತಾರೆ. ದಿ. 24.06.2023 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಮರು ಹೇಳಿಕೆ ನೀಡಿರುತ್ತಾರೆ ಹಾಗೂ ಘಟನೆ ನಡೆದ ಸ್ಥಳ ಮಹಜರ್ ನಡೆಸಲಾಯಿತು ಹಾಗೂ ಚಾಸಾ 1 ರವರು ಠಾಣೆಗೆ ಹಾಜರುಪಡಿಸಿದ್ದ ತನ್ನ redmi mobile ಹಾಗೂ ಆರೋಪಿ ಕಳುಹಿಸಿದ್ದ Whatsapp screenshot ಪ್ರತಿಗಳನ್ನು ಮಹಜರ್ ಮೂಲಕ ಅಮಾನತುಪಡಿಸಿಕೊಂಡು ಮಾಲು ಪಟ್ಟಿಯಲ್ಲಿ ಆಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಹಾಗೂ ಚಾಸಾ 1 ರವರ 164 statement ನ್ಯಾಯಾಲಯದಿಂದ ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ.

ದಿ. 30.06.2023 ರಂದು ಚಾಸಾ 1 ರವರಿಂದ ವಶಪಡಿಸಿಕೊಂಡಿದ್ದ ಮೊಬೈಲ್ ಅನ್ನು CEN Police station ಕಳುಹಿಸಿ retrieve ಮಾಡಿಸಲಾಯಿತು. ದಿ. 05.07.2023 ರಂದು ಚಾಸಾ 1 ರವರು ಆರೋಪಿ ಕಳುಹಿಸಿದ Facebook screenshot ಪ್ರತಿಗಳನ್ನು ಠಾಣೆಗೆ ಹಾಜರುಪಡಿಸಿದ್ದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿ. 24.07.2023 ರಂದು ಚಾಸಾ 1 ರವರ redmi mobile ಅನ್ನು ಬೆಂಗಳೂರಿನ FSL ಗೆ ಕಳುಹಿಸಲಾಯಿತು. ದಿ. 04.11.2023 ರಂದು ಬೆ. 01.30 ಕ್ಕೆ ಚಾಸಾ 15 ಮತ್ತು 16 ರವರು ನಾಪೋಕ್ಲು ವಿನ ಬೇತು ಗ್ರಾಮದಿಂದ ಆರೋಪಿಯನ್ನು ಕರೆದುಕೊಂಡು ಬಂದು ಠಾಣೆಗೆ ಹಾಜರುಪಡಿಸಿದ್ದು ಆರೋಪಿಯಿಂದ OPPO company ಮೊಬೈಲ್ ಅನ್ನು ಮಹಜರ್ ಮೂಲಕ ಅಮಾನತುಪಡಿಸಿಕೊಂಡು ಮಾಲು ಪಟ್ಟಿಯಲ್ಲಿ ಆಳವಡಿಸಿ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜುರುಪಡಿಸಲಾಯಿತು.

ದಿ. 06.12.2023 ರಂದು ಆರೋಪಿಯಿಂದ ವಶಪಡಿಸಿಕೊಂಡಿದ್ದ OPPO Mobile ಅನ್ನು CEN police station madikeri ಅಲ್ಲಿ retrieve ಗೆ ಆಳವಡಿಸಿದಾಗ ಯಾವುದೇ ದತ್ತಾಂಶಗಳು ಲಭ್ಯವಾಗಿರುವುದಿಲ್ಲ. ನಂತರ ದಿ. 18.12.2023 ರಂದು ಆರೋಪಿಯಿಂದ ವಶಪಡಿಸಿಕೊಂಡಿದ್ದ ಮೊಬೈಲ್ ಅನ್ನು FSL Bangalore ಗೆ ಕಳುಹಿಸಲಾಯಿತು. ದಿ. 25.05.2024 ರಂದು FSL ರವರಿಂದ ವರದಿ ಪಡೆದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿ ಪಿ 2 ದೂರಿನಲ್ಲಿ ಮತ್ತು ನಿಪಿ 3 ಮತ್ತು 6, 30, 33, 35 ಮಹಜರ್ ನಲ್ಲಿ ಹಾಗೂ ನಿ ಪಿ 36 ರ 65 ಬಿ ಪ್ರಮಾಣ ಪತ್ರದಲ್ಲಿ ಸಹಿಗಳನ್ನು ನೋಡಿ ಗುರುತಿಸಿದ್ದು ಸಹಿಗಳನ್ನು ನಿ ಪಿ 2(ಬಿ), 3(ಡಿ), 6(ಬಿ), 30 (ಬಿ), 33(ಎ), 35(ಬಿ), 36(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 7, 8, 31 ಮತ್ತು 32 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿ ಪಿ 9 ರಿಂದ 29 ರವರೆಗಿನ screenshot ಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು FIR ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 37 ಎಂದು, ಸಹಿಯನ್ನು ನಿ ಪಿ 37(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು FSL ರವರು ನೀಡಿದ ಎರಡು ಸ್ವೀಕೃತಿ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 38 ರಿಂದ 41 ಎಂದು, ಸಹಿಯನ್ನು ನಿ ಪಿ 38(ಎ) ರಿಂದ 41(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಾಲ್ಕು 65 ಬಿ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು 42 ರಿಂದ 45 ಎಂದು ಸಹಿಗಳನ್ನು 42(ಎ) ರಿಂದ 45(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು CEN police station ನಲ್ಲಿ ಮಹಜರ್

ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 46 ಮತ್ತು 47 ಎಂದು ಗುರುತಿಸಲಾಯಿತು. ಸಾಕ್ಷಿಯು Bangalore FSL ರವರು ನೀಡಿದ ಸಿ ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 48 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು ಮಾ 1 ರಿಂದ 4 ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ**

ಚಾಸಾ 1 ರವರು ನನಗೆ ಒಂದೇ ದೂರನ್ನು ಕೊಟ್ಟಿರುತ್ತಾರೆ, ಅದು ನಿ ಪಿ 2 ಆಗಿರುತ್ತದೆ. ಚಾಸಾ 1 ರವರ ಗಂಡನ ಮನೆ ಹಾಲುಗುಂದ, ದೂರಿನಲ್ಲಿ ಚಾಸಾ 1 ದೂರು ಕೊಡುವಾಗ ಗಂಡನ ಮನೆಯ ವಿಳಾಸ ತೋರಿಸಿರುತ್ತಾರೆ, ಆದರೆ ಕೃತ್ಯ ಚಾಸಾ 1 ರವರ ಪೊನ್ನಂಪೇಟೆ ತಂದೆಯ ಬಾಡಿಗೆ ಮನೆಯಲ್ಲಿ ಆಗಿರುತ್ತದೆ. ನಾನು ಆರೋಪಿ ಮತ್ತು ಚಾಸಾ 1 ರವರ ಯಾವ ಫೋನ್ ಟವರ್ ಗಳಿಂದ whats app message ಗಳು ಅವುಗಳ ವಿವರಗಳನ್ನು ತೆಗೆದುಕೊಳ್ಳಲಿಲ್ಲ. ಆರೋಪಿ ಮತ್ತು ಚಾಸಾ 1 ರವರ ಮೊಬೈಲ್ IMEI numbers ಪಡೆದಿಲ್ಲ. Madikeri CEN police ನವರಿಂದ ದತ್ತಾಂಶ ಸಿಕ್ಕಿರುವುದಿಲ್ಲ, ಆದರೆ Bangalore ನ FSL ನಲ್ಲಿ ದತ್ತಾಂಶ ಸಿಕ್ಕಿರುತ್ತದೆ. ಆ ದತ್ತಾಂಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ದತ್ತಾಂಶ ಕ್ಯಾಲಿಫೋರ್ನಿಯಾ Facebook companyಯಿಂದ ನೇರವಾಗಿ ಪಡೆದಿಲ್ಲ. ಯಾವ ಮೂಲ Email id ಯಿಂದ ಶೀಲು ದೇಚಮ್ಮ ಹಾಗೂ ಶರತ್ ನೆಲ್ಲಮಕ್ಕಡ ಎಂಬ ಹೆಸರಿನ Facebook account ಗಳ ಬಗ್ಗೆ ನಾನು ತನಿಖೆ ಮಾಡಿಲ್ಲ.

ಆರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ತಾನು ಬೆಂಗಳೂರಿನಲ್ಲಿದ್ದಾಗ ಚಾಸಾ 1 ರವರ ಜೊತೆ live in relationship ನಲ್ಲಿ ಇದ್ದೆವು ಎಂದು ಹೇಳಿದ್ದು, ಚಾಸಾ 1 ರವರು ಅದನ್ನು ಒಪ್ಪಿರುವುದಿಲ್ಲ. ಬೆಂಗಳೂರಿನಲ್ಲಿ ನಾನು ಯಾವುದೇ ತನಿಖೆ ಮಾಡಿಲ್ಲ. ಆರೋಪಿ ಮತ್ತು ಚಾಸಾ 1 ರವರು ಯಾವಾಗಿನಿಂದ ಪರಿಚಯ ಎಂದು ನಾನು ತನಿಖ ಮಾಡಿಲ್ಲ. ಆರೋಪಿ ಚಾಸಾ 1ರವರ ನಡುವೆ live in relationship ನಲ್ಲಿ ಇದ್ದಾಗ ಬ್ಯಾಂಕ್ ಮೂಲಕ ಹಣ ಕೊಟ್ಟಿದ್ದು ಅದರ ತನಿಖೆ ಮಾಡಿಲ್ಲ. ನಿ ಪಿ 9 ರಿಂದ 29 ರವರೆಗಿನ screenshot ಗಳಲ್ಲಿರುವ 3 ಫೋನ್ ನಂಬರ್ ಗಳು ಆರೋಪಿಯದ್ದಾಗಿರುತ್ತದೆ. ಈ 3 ಫೋನ್ ನಂಬರ್ ಆರೋಪಿಯ ಹೆಸರಿನಲ್ಲಿದೆ ಎಂದು ತೋರಿಸಲು ತನಿಖೆ ಮಾಡಿಲ್ಲ. ಚಾಸಾ 2 ರಿಂದ 4 ರವರು ಚಾಸಾ 1 ರವರ ಸಂಬಂದಿಕರು ಎಂದರೆ ಸರಿ. ಆರೋಪಿಯ ವಶದಿಂದ ಮೊಬೈಲ್ ಅನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.ಚಾಸಾ 1 ರವರು ನ್ಯಾಯಾಲಯದಲ್ಲಿ ನ್ಯಾಯಾಧೀಶರವರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುವಂತೆ ಆರೋಪಿ fake account ಗಳಲ್ಲಿ ತನ್ನ ಮೊಬೈಲ್ ನಂಬರ್ ಸಂಖ್ಯೆ ಯನ್ನು ಹಾಕಿ ಬೇರೆಯವರು ಕೆಟ್ಟ message ಗಳನ್ನು ಕಳುಹಿಸಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ನಾನು ತನಿಖೆ ಮಾಡಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ